# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಾರವಾರ

**ಸಿ.ಸಿ. ನಂ. 1749/2024**

ಆರೋಪಿತರ ಹೆಸರು : ಸುಲಕ್ಷಾ ಮಹೇಶ ಗಂಜೇಕರ,
ವಯಸ್ಸು : ವಯಸ್ಕ,
ವಾಸ : H.No.517, ಚಿಂಚಿವಾಡ,
ಸದಾಶಿವಗಡ, ಕಾರವಾರ.

## ಭಾರತೀಯ ನಾಗರಿಕ ಸುರಕ್ಷಾ ಸಂಹಿತಾ ಕಲಂ.351 ರ ಅಡಿ ಆರೋಪಿತರ ಹೇಳಿಕೆ

ಪ್ರಶ್ನೆಃ 1: ನ್ಯಾಯಾಲಯದ ಸಮಕ್ಷಮ ಸಾಕ್ಷಿ ಸಾಕ್ಷ ನುಡಿದಿರುವುದನ್ನು ಕೇಳಿಸಿಕೊಂಡಿರುವಿರಾ ?

ಉತ್ತರಃ

ಪ್ರಶ್ನೆಃ 2: **ಫಿರ್ಯಾದಿ-1/ಆನಂದ ನಾರಾಯಣ ಮಂಜೇಕರ,** ಇವರು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ನಿಮ್ಮ ಗಂಡ ಫಿರ್ಯಾದಿಯವರ ಸ್ನೇಹಿತರಾಗಿದ್ದು, ನೀವು ನಿಮ್ಮ ಜಮೀನನ್ನು ಮಾರಾಟ ಮಾಡುವುದಾಗಿ ಹೇಳಿದ್ದು, ಫಿರ್ಯಾದಿದಾರರು ಜಮೀನನ್ನು ಕ್ರಯಕ್ಕೆ ತೆಗೆದುಕೊಳ್ಳಲು ಇಚ್ಚೆ ಹೊಂದಿರುವುದಾಗಿ ತಿಳಿಸಿದ್ದು, ಆನಂತರ ಆರೋಪಿ ತಮಗೆ ಆರ್ಥಿಕ ತೊಂದರೆ ಇದ್ದು ಅವರಿಗೆ ರೂ.7,00,000/- ತುರ್ತಾಗಿ ಬೇಕಾಗಿದ್ದು, ದಾಖಲೆಗಳನ್ನು ತಯಾರಿಸಿದ ನಂತರ ಜಮೀನನ್ನು ಮಾರಾಟ ಮಾಡುವುದಾಗಿ, ಆ ಸಮಯದಲ್ಲಿ ಸದರಿ ಹಣವನ್ನು ಕ್ರಯದ ಹಣದಲ್ಲಿ ಹೊಂದಾಣಿಕೆ ಮಾಡುವುದಾಗಿ ಹೇಳಿದ್ದಿರಿ ಎಂದು ಸಾಕ್ಷ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ

. ಪ್ರಶ್ನೆಃ 3: ಫಿರ್ಯಾದಿ-1ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಕ್ರಯದ ಕರಾರು ಪತ್ರ ಬರೆದು ಕೊಡಲು ಆರೋಪಿಯಾದ ನಿಮ್ಮನ್ನು ಕೇಳಿದಾಗ ಈಗ ತುರ್ತಾಗಿ ಹಣದ ಅವಶ್ಯಕತೆ ಇರುವುದಾಗಿ ಹೇಳಿದ್ದರಿಂದ ಫಿರ್ಯಾದಿದಾರರು ರೂ.6,50,000/- ಗಳನ್ನು ಕೊಟ್ಟಿರುವುದಾಗಿ ಸಾಕ್ಷ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ

. ಪ್ರಶ್ನೆಃ 4: ಫಿರ್ಯಾದಿ-1ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ , ಆರೋಪಿಯಾದ ನೀವು ಒಪ್ಪಿಕೊಂಡಂತೆ ನಡೆದುಕೊಳ್ಳದೆ ಇದ್ದುದರಿಂದ ಫಿರ್ಯಾದಿದಾರರು ಸದರಿ ಹಣವನ್ನು ಮರುಪಾವತಿಸಲು ಕೇಳಿದಾಗ ಆರೋಪಿತರಾದ ನೀವು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಸದಾಶಿವಗಡ, ಕಾರವಾರ ಶಾಖೆಗೆ ಸಂಭಂದ ಪಟ್ಟ ಚೆಕ್ ನಂ.712049, ರೂ.5,00,000/- ಗಳಿಗೆ, ದಿನಾಂಕ 18-11-2022 ರ ದಿನಾಂಕವನ್ನು ನಮೂದಿಸಿ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಸದಾಶಿವಗಡ, ಕಾರವಾರ ಶಾಖೆಗೆ

ಸಂಭಂದ ಪಟ್ಟ ಚೆಕ್ ನಂ.712050, ರೂ.25,000/- ಗಳಿಗೆ, ದಿನಾಂಕ 18-11-2022 ರ ದಿನಾಂಕವನ್ನು ನಮೂದಿಸಿ ನೀಡಿರುವುದಾಗಿ ಸಾಕ್ಷ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ 5: ಫ್ರಾಸಾ-1 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ತಾನು ಚೆಕ್ ನ್ನು ದಿನಾಂಕ 19-11-2022 ರಂದು ನಗದೀಕರಣಕ್ಕಾಗಿ ಕೆನರಾ ಬ್ಯಾಂಕ, ಸದಾಶಿವಗಡ, ಕಾರವಾರ ಶಾಖೆಗೆ ಸಲ್ಲಿಸಿದಾಗ, “Funds Sufficient” ಎಂಬ ಹಿಂಬರಹದೊಂದಿಗೆ ವಾಪಸ್ಸ ಬಂದಿರುತ್ತದೆ ಎಂದು ಸಾಕ್ಷ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ 6: ಫ್ರಾಸಾ-1 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ವಕೀಲರ ಮುಖಾಂತರ ದಿನಾಂಕ 06-12-2022 ರಂದು ಲೀಗಲ್ ನೋಟಿಸ್ ನೀಡಿದ್ದು, 15 ದಿನಗಳ ಒಳಗೆ ಸದ್ರಿ ಸಾಲದ ಹಣವನ್ನು ಮರುಪಾವತಿಸಲು ಕೇಳಿಕೊಂಡಿದ್ದು, ನೀವು ಚೆಕ್ಕಿನ ಹಣವನ್ನು ಫಿರ್ಯಾದಿದಾರರಿಗೆ ಹಿಂದಿರುಗಿಸದೇ ಇರುವ ಕಾರಣಕ್ಕೆ ನೀವು ಕಲಂ 138 ನೆಗೋಶಿಯೇಬಲ್ ಇನ್ಸ್ಟುಮೆಂಟ್ ಆಕ್ಟ್ ಪ್ರಕಾರ ಪ್ರಕರಣ ದಾಖಲು ಮಾಡಿರುವುದಾಗಿ ಸಾಕ್ಷ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ 7: ನಿಮ್ಮ ಪರ ಸಾಕ್ಷಿ ವಿಚಾರಣೆ ಇದೆಯೇ ?

ಉತ್ತರಃ

ಪ್ರಶ್ನೆ 8: ನೀವು ಏನಾದರೂ ಹೇಳುವಿರಾ?

ಉತ್ತರಃ

(ಆರೋಪಿಗೆ ಕನ್ನಡ ಭಾಷೆಯಲ್ಲಿನ ಮೇಲಿನ ಪ್ರಶ್ನೆಗಳನ್ನು ಕೇಳಲಾಗಿ ಅವರು ನೀಡಿದ ಉತ್ತರಗಳನ್ನು ಯಥಾವತ್ತಾಗಿ ಬರೆದುಕೊಳ್ಳಲಾಗಿದೆ)

ಕಾರವಾರ

ದಿನಾಂಕಃ 21-02-2026 ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,

ಕಾರವಾರ